



> ನಾನು ಮೀನಾಕ್ಷಿ ಹೂಡಾ ಅವರ ಕೋಚ್ ಆಗಿ ಮಾರ್ಗದರ್ಶನ ಮಾಡುವ ಸಮಯದಲ್ಲಿ ವಿದ್ಯಾರ್ಥಿಯೂ ಆಗಬೇಕಾಯಿತು. ನೋಟ್‌ಬುಕ್‌ಗಳಲ್ಲಿ ಬಾಕ್ಸಿಂಗ್ ಕೌಶಲ, ವ್ಯಾಯಾಮಗಳ ಕುರಿತು ನೋಟ್ಸ್ ಮಾಡಿಕೊಳ್ಳುವುದು, ಪಂಚ್, ಫುಟ್‌ವರ್ಕ್‌ಗಳ ರೇಖಾಚಿತ್ರ ಬಿಡಿಸಿಟ್ಟುಕೊಂಡು ವಿವರಿಸುವುದು. ಯೂಟ್ಯೂಬ್‌ನಲ್ಲಿ ಬಾಕ್ಸಿಂಗ್ ತುಣುಕುಗಳನ್ನು ನೋಡುತ್ತಿದ್ದೆ. ಆ ಮೂಲಕ ಹೊಸತನ್ನು ಹೇಳಿಕೊಡುವ ಪ್ರಯತ್ನ ಮಾಡುತ್ತಿದ್ದೆ. ನಮ್ಮ ಪ್ರಯತ್ನಗಳನ್ನು ನೋಡಿ ಜನ ನಗುತ್ತಿದ್ದರು. ಗ್ಲೌಸ್ ಮತ್ತು ಪ್ಯಾಡ್‌ಗಳನ್ನು ನನ್ನ ಉಳಿತಾಯದ ಹಣದಲ್ಲಿ ತಂದಿದ್ದೆ. ಕ್ರಮೇಣ ಬಾಕ್ಸಿಂಗ್ ಕಲಿಯಲು ಆಸಕ್ತಿ ತೋರಿದ ಊರಿನ ಹೆಣ್ಣುಮಕ್ಕಳಿಗೆ ತರಬೇತಿ ನೀಡಲು ಅವರ ಪಾಲಕರಿಂದ ಅನುಮತಿ ಪಡೆಯುವುದು ಕೂಡ ಸವಾಲಾಗಿತ್ತು
>
> **-ವಿಜಯ್ ಹೂಡಾ,**
> **ಬಾಕ್ಸಿಂಗ್ ಕೋಚ್**

## ಚಿನ್ನದ ರಿಂಗ್..

ವಿಶ್ವಕಪ್ ಬಾಕ್ಸಿಂಗ್ ರಿಂಗ್‌ಗೆ ಈ ಬಾರಿ ಭಾರತದ ವನಿತೆಯರು ಚಿನ್ನದ ಹೊಳಪು ತುಂಬಿದರು. ಏಳು ಚಿನ್ನದ ಪದಕ ಜಯಿಸಿದರು. ಈ ವನಿತೆಯರು ಪದಕ ಸಾಧನೆ ಮಾಡಿದ ಎಲ್ಲ ತೂಕದ ವಿಭಾಗಗಳು ಮುಂಬರುವ ಒಲಿಂಪಿಕ್ ಕೂಟದಲ್ಲಿ ಇವೆ. ಆದ್ದರಿಂದ ಭಾರತೀಯ ಬಾಕ್ಸರ್‌ಗಳ ಆತ್ಮವಿಶ್ವಾಸವನ್ನು ಈ ಗೆಲುವು ಹೆಚ್ಚಿಸಿದೆ.

**ಹರಿಯಾಣದ ಮೀನಾಕ್ಷಿ:** 48 ಕೆ.ಜಿ. ವಿಭಾಗದ ಬಾಕ್ಸಿಂಗ್‌ನಲ್ಲಿ ಚಿನ್ನ ಗೆದ್ದ ಮೀನಾಕ್ಷಿ ಹೂಡಾ ಹರಿಯಾಣದ ಪುಟ್ಟ ಹಳ್ಳಿ ರೂರ್ಕಿಯವರು. ಆಟೊ ರಿಕ್ಷಾ ಚಾಲನೆಯ ವೃತ್ತಿಯಲ್ಲಿದ್ದ ಅಪ್ಪನ ಶ್ರಮಕ್ಕೆ ತಕ್ಕ ಫಲ ನೀಡುವಲ್ಲಿ ಮೀನಾಕ್ಷಿ ಯಶಸ್ವಿಯಾಗಿದ್ದಾರೆ. ಬಾಲ್ಯದಲ್ಲಿ ಬಾಕ್ಸಿಂಗ್‌ನತ್ತ ಆಸಕ್ತಿ ತೋರಿದ ಹುಡುಗಿಗೆ 'ಮುಖ ಮೂತಿಗೆ ಪೆಟ್ಟು ಬಿದ್ದು ಊನವಾದರೆ ಮುಂದೆ ಯಾರು ನಿನ್ನ ಮದುವೆ ಆಗ್ತಾರೆ. ಅಪ್ಪ, ಅಮ್ಮನಿಗೆ ಹೊರೆಯಾಗಬೇಡ, ಲಕ್ಷಣವಾಗಿ ಮನೆ ಕೆಲಸ ಕಲ್ಕೊಂಡು ಇರು' ಎಂದ ಅಕ್ಕಪಕ್ಕದ



ಮೀನಾಕ್ಷಿ ಹೂಡಾ

## ಸಾಂಸ್ಕೃತಿಕ ನಗರಿಯ ಪ್ರಣವಿ ಸಾಧನೆ



ಮೈಸೂರಿನ ಪ್ರಣವಿ ಅರಸ್ ಅವರು ಗಾಲ್ಫ್ ಕ್ರೀಡೆಯಲ್ಲಿ ಈಚೆಗೆ ಒಂದು ಅಪರೂಪದ ಸಾಧನೆ ಮಾಡಿದರು. ಅವರು ಇಂಡಿಯನ್ ಗಾಲ್ಫ್ ಪ್ರೀಮಿಯರ್ ಲೀಗ್ (ಐಜಿಪಿಎಲ್) ಟೂರ್ ಪ್ರಶಸ್ತಿ ಗೆದ್ದರು. ಇದರೊಂದಿಗೆ ವೃತ್ತಿಪರ ಐಜಿಪಿಎಲ್ ಟೂರ್ನಿಯಲ್ಲಿ ಪುರುಷ ಸ್ಪರ್ಧಿಗಳನ್ನು ಮಣಿಸಿ ಕಿರೀಟ ಗೆದ್ದ ಭಾರತದ ಮೊದಲ ಮಹಿಳಾ ಗಾಲ್ಫರ್ ಎಂಬ ದಾಖಲೆ ಬರೆದರು.

ಬಾಂಬೆ ಪ್ರೆಸಿಡೆನ್ಸಿ ಗಾಲ್ಫ್ ಕ್ಲಬ್‌ನಲ್ಲಿ ನಡೆದ ಅಂತಿಮ ಸುತ್ತಿನಲ್ಲಿ 22 ವರ್ಷದ ಪ್ರಣವಿ ಚಾಂಪಿಯನ್ ಆದರು. ಪ್ರಣವಿ ಅವರಿಗೆ ಪ್ರಬಲ ಸ್ಪರ್ಧೆಯೊಡ್ಡಿದ್ದ ಚಂಡೀಗಢದ ಕರಣ್‌ದೀಪ್ ಕೊಚ್ಚರ್ ರನ್ನರ್ ಅಪ್ ಆದರು. ಕನ್ನಡತಿ ಅದಿತಿ ಅಶೋಕ್ ಅವರು ಒಲಿಂಪಿಕ್ಸ್ ಗಾಲ್ಫ್‌ನಲ್ಲಿ ಸ್ಪರ್ಧಿಸಿದ ಕರ್ನಾಟಕದ ಮೊದಲ ಆಟಗಾರ್ತಿಯಾಗಿದ್ದಾರೆ. ಪ್ರಣವಿ ಕೂಡ ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದು, ದೊಡ್ಡ ಪ್ರಶಸ್ತಿಗಳ ಮೇಲೆ ಕಣ್ಣಿಟ್ಟಿದ್ದಾರೆ.